**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 92/2018**

| | | |
|---|---|---|
| ಸಾಕ್ಷಿಯ ಹೆಸರುಃ | ಲಕ್ಷ್ಮಣ | ಪ್ರಾಸಾಃ 4 |
| ತಂದೆ/ಗಂಡನ ಹೆಸರುಃ | ಬಜ್ಜು | ಚಾಸಾಃ 3 |
| ವಯಸ್ಸು ಃ | 52 ವರ್ಷ | ದಿಃ 03-11-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಮುದ್ನಾಳ ಸಣ್ಣ ತಾಂಡಾ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನನಗೆ ಚಾಸಾಃ 2 ರವರ ಪರಿಚಯ ಇದೆ. ಚಾಸಾಃ 2 ರವರು ಮರಣ ಹೊಂದಿರುತ್ತಾರೆ. ನನಗೆ ಆರೋಪಿತನ ಪರಿಚಯ ಇದೆ. ನನಗೆ ಜಗಳವಾಗಿದ್ದರ ಬಗ್ಗೆ ಮಾಹಿತಿ ಇದೆ. ಪೋಲಿಸರು ಬಂದಿರುತ್ತಾರೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಗುನ್ನೆ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-2 ಎಂದು, ಸಾಕ್ಷಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ನನಗೆ ಇಷ್ಟನ್ನು ಹೊರತು ಪಡಿಸಿ ನನಗೆ ಏನೂ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸರಕಾರಿ ಸಹಾಯಕ ಅಭೀಯೋಜಕರವರು ಪಾಟಿ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ನ್ಯಾಯಾಲಯದ ಮುಂದೆ ಇರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

ದಿನಾಂಕಃ 19-10-2017 ರಂದು ಪೊಲಿಸರು ಬೆಳಿಗ್ಗೆ 11.30 ಗಂಟೆ ಸಮಯಕ್ಕೆ ಪಂಚನಾಮೆಗೆ ನನಗೆ ಮತ್ತು ಚಾಸಾಃ 2 ರವರಿಗೆ ಪಂಚನಾಮೆಗೆ ಕರೆಯಿಸಿರುತ್ತಾರೆ ಎಂದರೆ ಸರಿ. ನಮ್ಮ ಸಮಕ್ಷಮದಲ್ಲಿ ಪಂಚನಾಮೆಯಲ್ಲಿ ಕೊಡ್ಲಿಯನ್ನು ಜಪ್ತಿ ಮಾಡಿಕೊಂಡಿರುತ್ತಾರೆ

ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರು ಶ್ರೀ. ಜಿ.ಬಿ. ಎನ್ ಇವರಿಂದ**

1. ನನಗೆ ಪಂಚನಾಮೆಯನ್ನು ಮಾಡಿದ ದಿನಾಂಕಃ 19-10-2017 ರಂದು ಪಂಚನಾಮೆ ಆಗಿದ್ದರ ಬಗ್ಗೆ ನನಗೆ ದಿನಾಂಕ ಹೇಳಲು ಬರುವುದಿಲ್ಲ ಎಂದರೆ ಸರಿ. ಸದರಿ ಜಗಳವಾಗಿದ್ದರ ಬಗ್ಗೆ ನನಗೆ ಏನೂ ಮಾಹಿತಿ ಇಲ್ಲ. ಪೊಲಿಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದರಲ್ಲಿ ಏನೂ ಬರೆದಿರುತ್ತಾರೆ ಎಂದು ಮಾಹಿತಿ ನನಗೆ ಗೊತ್ತಿಲ್ಲ. ನನ್ನ ಮತ್ತು ಚಾಸಾಃ 2 ರವರ ಸಮಕ್ಷಮದಲ್ಲಿ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಪೋಲಿಸರು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**